ತಾಸುಗಟ್ಟಲೆ ಭಾಷಣ ಮಾಡೋ ರೂಢಿ ಇರುವ ಪ್ರೊಫೆಸರ್ ನನ್ನ ತಾಪತ್ರಯ ಕೇಳಲಿಕ್ಕಿಲ್ಲ, ತಮ್ಮದೇ ಭಾಷಣ ಕುಟ್ಟತಾರ ಅನಿಸಿತು. ಅವರು ತಮ್ಮ ಮಾತು ಮುಂದುವರಿಸಿದರು, 'ಸರಕಾರ ಉತ್ಸವ, ಸಮಾರಂಭಗಳನ್ನ ಈ ಕೊರೊನಾ ಕಾಲದಾಗ ರದ್ದು ಮಾಡೇತಿ. ಆಗಿನ ಸಾರ್ವಜನಿಕ ಗಣೇಶೋತ್ಸವ ಈಗಿಲ್ಲ, ಧಾಂ ಧೂಂ ಇಲ್ಲ, ಸಿಡಿಮದ್ದುಗಳ ಆವಾಜ ಇಲ್ಲ, ಡಿ.ಜೆ.ಯ ಎದಿ ನಡುಗುವ ಅಬ್ಬರ ಇಲ್ಲ. ಆದ್ರ ಕೊರಾನಾದ ನಗಾರಿ ಬಡೀತಾನ ಜೋರು ಆಗೇತಲ್ಲ! ಮಾಮೂಲು ಕೆಮ್ಮು ನೆಗಡಿಯೇ ನಾನು ನಾನು ಅನ್ನೋ ಮನುಷ್ಯನನ್ನ ಥರಗುಡುವ ಹಾಂಗ ಮಾಡಿಬಿಟ್ಟಿತು. ಅಲ್ರೀ, ನಮ್ಮ ಮೂಗನ್ನ ನಾವು ಮುಟ್ಟದ್ರೂ ಕೈಗೆ ಸೋಪು ಇಲ್ಲಾ ಸ್ಯಾನಿಟೈಸರ್ ಹಚ್ಚಿ ತೊಳ್ಕೋಬೇಕಲ್ಲ! ಇರಲಿಬಿಡ್ರಿ, ಈಗಂತೂ ಸ್ವಲ್ಪ ಕಂಟ್ರೋಲ್ ಆಗೇತಿ. ಇದೇ ಹೊತ್ತಿನಾಗ ತಗಡು ಹಾಕಿಕೊಟ್ಟು ಬಿಡ್ರಿ. ಅಡ್ವಾನ್ಸ ಕೊಟ್ಟದ್ದೂ ಐತಿ... ಮಾತಿನ ಪ್ರಕಾರ ನಡಕೋಬೇಕಲ್ಲ...' ಮಳಿ ರಪ ರಪ ಬಂದಂಗ ಮಾತಾಡಿದರು.

'ನಿಮ್ಮ ಪರಿಸ್ಥಿತಿ ಅರ್ಥ ಆಗತೈತಿ. ನೋಡ್ರಿ ಸರ್, ನನ್ನ ಗ್ಯಾರೇಜ್ ಅವಸ್ಥೆಯನ್ನ. ಕೆಲಸಗಾರರು ಬಿಟ್ಟು ತಮ್ಮ ಹಳ್ಳಿಗಳಿಗೆ ಹೋಗಿಬಿಟ್ವಾರ. ಇನ್ನ ಒಬ್ಬಿಬ್ಬರನ್ನ ನಾನೇ ಬಿಡಿಸಿ ಕಳಿಸೀನಿ. ನನ್ನ ಬಲಗೈ ಬಂಟ ಸಲೀಮ ಇದ್ದನಲ್ಲಾ, ಅವ ಕೊರೊನಾ ಮಾರಿಗೆ ಆಹುತಿಯಾದ. ನಿನ್ನೆ ಅವನ್ನ ಮಣ್ಣು ಮಾಡಿಬಂದೆ. ಬೇಕಂದ್ರ ನಿಮ್ಮ ಅಡ್ವಾನ್ಸ್ ಕೊಡ್ತೀನಿ, ತಗೊಂಡು ಬಿಡ್ರಿ' ಅಂದು ಕಿಸೆಗೆ ಕೈ ಹಾಕಿದ.

'ಛೆ,ಛೆ, ಅದೇನೂ ಬ್ಯಾಡ. ನಮಗ ಕೆಲಸ ಆಗಬೇಕಾಗೇತಿ, ಅಷ್ಟಽಽ'

'ಇಷ್ಟು ದಿನ ತಡಕೊಂಡೀರಿ, ಇನ್ನಷ್ಟು ತಡೀರಿ, ಡಾಕ್ಟರ್ ಹೇಳೋ ಪ್ರಕಾರ ಎರಡನೇ ಅಲೆ ಸನಿಹದಲ್ಲೇ ಐತಿ, ಅದು ಇನ್ನೂ ಭೀಕರ ಅಂತ. ನೀವು ಈಗ ಕೊರೊನಾ ಕಡಿಮಿ ಆಗೇತಿ ಅಂತೀರಿ. ನಿನ್ನೆರ ಸಲೀಮನನ್ನ ದಫನ ಮಾಡಿದಿವಿ. ಆವಾಗಲೇ ನಿರ್ಧಾರ ಮಾಡಿಬಿಟ್ಟೀನಿ, ಇನ್ನ ಕೊರೊನಾ ಸೈನಿಕನಾಗಿ ಕೆಲಸ ಮಾಡ್ತೀನಿ ಅಂತ. ನಾನು ಸತ್ತು ಹಳೇ ಮಾತಾಗಬೇಕಿತ್ತು. ಬದುಕುಳಿದೀನಿ ಅಂದ್ರ ದೇವರು ನನ್ನಿಂದ ಏನೋ ಅಪೇಕ್ಷೆ ಪಟ್ಟಾನಂತ ತಿಳಕೊಂಡೀನಿ. ಕೊರೊನಾ ಸೈನಿಕನಾಗಿ ವಿಶೇಷವಾಗಿ ಶವಸಂಸ್ಕಾರಕ್ಕ ಸಂಬಂಧಪಟ್ಟಂಗ ಸೇವಾ ಮಾಡೂದಂತ ಮನಸು ಮಾಡೀನಿ. ಇದು ಈಗ ಅವಶ್ಯ ಐತಿ... ಕೊರೊನಾ ಅಲೆ ಬಂದು ಹೋಗಲಿ. ಮತ್ತ ಕೆಲಸ ಸರಾಗ ನಡೀಲಿ. ಆಗ ನಿಮ್ಮ ಕೆಲಸಾನಽ ಮೊದಲು ತಗೋತೀನಿ, ಆತಿಲ್ಲೊ.'

ಎಲ್ಲಾ ಅನಿಶ್ಚಿತ, ಬೇರೆ ದಾರಿಯಿಲ್ಲ ಅನಿಸಿತು ಪ್ರೊಫೆಸರ್‌ಗೆ.

'ತಪ್ಪು ತಿಳಕೋಬ್ಯಾಡ್ರಿ, ಹೀಂಗ ಹೇಳ್ತೀನಂತ. ನೀವು ಕೈಕೊಂಡ ಕೆಲಸದಾಗ ರಿಸ್ಕ್ ಐತಿ. ಮಕ್ಕಳು ಮರಿ ಇದ್ದೋರು. ವಿಚಾರ ಮಾಡ್ರಿ.'

'ಡಾಕ್ಟರರು, ಆಸ್ಪತ್ರೆಯ ಸಿಬ್ಬಂದಿ ಈ ಸಂಕಟ ಕಾಲದಾಗ ಕೆಲಸ ಮಾಡ್ತಾರಲ್ಲ! ನಾನೂ ಹಾಗಂತ ತಿಳಕೊಂಡೀನಿ.'

ಇನ್ನ ಇವನೊಂದಿಗೆ ಮಾತಾಡೋದು ಉಪಯೋಗ ಇಲ್ಲ ಅನಿಸಿ 'ಆಯ್ತು, ನಾ ಬರ್ತೀನಿ' ಅಂದರು ಪ್ರೊಫೆಸರ್. ಹೆಂಡತಿ ಹೇಳಿ ಕಳಿಸಿದ್ದಳು, 'ಅವ ತಡ ಮಾಡಿದ್ದರಿಂದಲೇ ಮನಿ ಸೋರ್ತಾ ಇರೋದು, ಅವನಿಗೆ ದಬಾಯಿಸಿ, ಕೆಲಸ ತಗೋಬೇಕು, ನಿಮಗ ಗಟ್ಟಿ ಮಾತಾಡಲಿಕ್ಕೇ ಬರೂದಿಲ್ಲ.' ಅಡಕತ್ತಿನಾಗಿನ ಅಡಿಕಿ ಆಗೀನಿ ಅಂದುಕೊಳ್ಳುತ್ತಾ ಎದ್ದರು.

2

ತಿಂಗಳೊಪ್ಪತ್ತಿನಲ್ಲಿ ಕೊರೊನಾ ಎರಡನೇ ಅಲೆ ದಾಳಿ ಮಾಡೇಬಿಟ್ಟಿತು. ದಿನದಿಂದ ದಿನಕ್ಕೆ ಕೊರೊನಾಪಾಸಿಟಿವ್ ಕೇಸುಗಳು ಜಾಸ್ತಿಯಾಗ ತೊಡಗಿದವು. ಎಷ್ಟೋ ಮಂದಿ ಈಗ ಕ್ವಾರಂಟೈನದಲ್ಲಿ, ಗೃಹಬಂಧನದಲ್ಲಿದ್ದಾರೆ. ರಸ್ತೆಗಳು ಬಿಕೋ ಅಂತಿವೆ. ಈ ವೈರಸ್ಸಿನ ಎದುರು ಮನುಷ್ಯರು ಕಾಲು ಕೆದರಿ ತೆಗೆಯೋ ಜಗಳಗಳು, ದ್ವೇಷಾಸೂಯೆಗಳು, ಹಾವಳಿಗಳು ಸದ್ಯ ಮುದುಡಿಕೊಂಡು ಕೂತಿವೆ. ಈಗ ಎಲ್ಲಾರೂ ತಮ್ಮ ಜೀವರಕ್ಷಣೆಯ ಕಡೀಗೆ ನಿಗಾವಹಿಸಿದರು. ಸುರೇಶರಂಥ ವೈದ್ಯರು ಅವಿಶ್ರಾಂತವಾಗಿ ದುಡೀತಾ ರೋಗಿಗಳ ಜೀವ ಉಳಿಸೋ ಕೆಲಸದಲ್ಲಿ ತಮ್ಮ ಜೀವ ಸವೆಯಿಸತೊಡಗಿದ್ದರು. ಆಸ್ಪತ್ರೆಗಳಲ್ಲಿ ರೋಗಿಗಳು ಎಲ್ಲಿ ಬೇಕಲ್ಲಿ ಕಾರಿಡಾರಿನಲ್ಲಿ ಹೊರಗೆ ಒಳಗೆ ತುಂಬಿ ತುಳುಕತೊಡಗಿದ್ದರು. ಸುರೇಶ ಡಾಕ್ಟರು ಕೊರೊನಾ ರೋಗಿಗಳಿಗೆ ಪ್ರತ್ಯೇಕ ಬಿಲ್ಡಿಂಗಿಗಾಗಿ ಪ್ರಯತ್ನ ಮಾಡತಿದ್ದರೆ ಸಾವಿನ ಬಾಗಿಲಲ್ಲೂ ಕೆಲವರು ಬೆಡ್ ಕೊಡಿಸಲು, ವ್ಯಾಕ್ಸಿನ್ ವಿತರಿಸಲು ತಮ್ಮ ಬಕ್ಕಣ